MYSORE LEGISLATIVE ASSEMBLY

THIRTY-FIRST DAY.

Thursday, 2nd April 1964.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Merger of Goa in Mysore State

*Q.—100. Sri C. R. RANGE GOWDA (Magadi).—

Will the Government be pleased to state :—

(*a*) the action, if any, taken by the Government to urge upon the Union Government, the justice of merger of Goa in Mysore State ?

(*b*) whether they have impressed the Government of India as regards the historical and cultural identity of Goa with Mysore ;

(*c*) whether they are aware that the Maharashtra Government is urging the Government of India for the merger of Goa in Maharashtra ?

A.—Sri S. NIJALINGAPPA (Chief Minister).—

(*a*) There was no occasion to take up this matter with the Union Government.

(*b*) This will be done at the appropriate time.

(*c*) Government have no information.

ಶ್ರೀ ಸಿ. ಆರ್. ರಂಗೇಗೌಡ —2 ನೇ ಪ್ರಶ್ನೆಗೆ, ಸಕಾಲದಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ. ಗೋವ ಮೈತ್ರಿಯಿಂದ ಸೇರಬೇಕೆಂಬುದಕ್ಕೆ ಭೌಗೋಳಿಕ, ಚಾರಿತ್ರಿಕ ರುಜುವಾತುಗಳಿವೆ ಎಂಬುದನ್ನು ಮನಗಂಡಿದ್ದೀರ, ಅವುಗಳನ್ನು ಅಧ್ಯಯನ ಮಾಡಿದ್ದೀರ.

Mr. SPEAKER.—It is a matter for the Union Government.

ಶ್ರೀ ಸಿ. ಆರ್. ರಂಗೇಗೌಡ.—ಕೆಳದಿ, ಬಿಜಾಪುರ ರಾಜಮನೆತನದವರಿಗೂ, ಪೋರ್ಚುಗೀಸರಿಗೂ ನಡೆದ ಕಾಲು ಕರಾರುಗಳು, ಕಾಗದ ಪತ್ರಗಳು...

Mr. SPEAKER.—This is a matter primarily resting firstly with the Central Government and perhaps equally with the Goa Government. Nobody other than these two is going to take a decision.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅದನ್ನು ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ...ನಮ್ಮ ಸರಕಾರದ ಅಧಿಕಾರಿಗಳಿದ್ದರು.

Mr. SPEAKER.—I wish to make the position very clear. Let there be no wrong notion. The Central Government asked for certain officers to be loaned and they were given. They functioned there not on behalf of the Mysore Government but on behalf of the Central Government. The member must not mistake the identity of individuals and think that they acted there as representing the Mysore Government. The Mysore Government never exercised and can never exercise jurisdiction till certain other things happen, if at all.

ಶ್ರೀ ಟಿ. ಎನ್. ಮಾದಪ್ಪ ಗೌಡ.—ನಮ್ಮ ಅಭಿಪ್ರಾಯ ಹೇಳುವುದಕ್ಕೆ ಅವಕಾಶವಿಲ್ಲವೆ?

Mr. SPEAKER.—To a certain extent it is only for the purpose of elucidation as to whether the Government has any idea or policy, but it is not proper to ask about ancient history and all that. We are not here to canvass. I am only saying that the scope is very limited though I do not want to shut it out completely.

ಶ್ರೀ ಎ. ಜೆ. ದೊಡ್ಡಮೇಟಿ.—(೫)ಗೆ ಉತ್ತರವಾಗಿ ಸರ್ಕಾರದವರಲ್ಲಿ ಮಾಹಿತಿಯೇನೂ ಇಲ್ಲವೆಂತ ಹೇಳಿದ್ದೀರಿ. ಸರಕಾರಕ್ಕೆ ಮಾಹಿತಿ ಪ್ರತ್ಯೇಕವಾಗಿ ಇಲ್ಲದಿದ್ದರೂ, ವೃತ್ತಪತ್ರಿಕೆಗಳ ಮೂಲಕ ಮಹಾರಾಷ್ಟ್ರ ಮುಖ್ಯಮಂತ್ರಿಗಳು ಅಲ್ಲಗೆ ಬಂದು ಗೋವಾ ಮಹಾರಾಷ್ಟ್ರಕ್ಕೆ ಸೇರಬೇಕೆಂದು ಹೇಳಿದ್ದೂ ರಕ್ಷಣಾ ಮಂತ್ರಿ ಶ್ರೀ ಚವಾನರು ವ್ಯಾಖ್ಯಾನ ಮಾಡಿದ್ದೂ ಸರಕಾರಕ್ಕೆ ಗೊತ್ತಿದೆಯೇ ಇಲ್ಲವೆ?

Mr. SPEAKER.—I have also read something about this delicate matter. I am also following the papers. Is there anything to show that there has been any correspondence or pressure or contact with the Central Government?

ಶ್ರೀ ಎ. ಜೆ. ದೊಡ್ಡಮೇಟಿ.—ಖಂಡಿತ ಆಗುತ್ತದೆ. ಇವರಿಬ್ಬರ ಭಾಷಣವೆ ಕಾಂಗ್ರೆಸ್ಸು ಸೋಲುವುದಕ್ಕೆ ಮುಖ್ಯ ಕಾರಣ.

† ಶ್ರೀ ಎಸ್. ನಿಜಲಿಂಗಪ್ಪ.—ಸರಕಾರಕ್ಕೆ ಯಾವ ವಿಚಾರವೂ ಗೊತ್ತಿಲ್ಲ. ಕೇಂದ್ರ ಸರಕಾರ ದೊಂದಿಗಾಗಲಿ, ಬೊಂಬಾಯಿ ಸರಕಾರದೊಂದಿಗಾಗಲಿ, ಅಥವಾ ಗೆ ೧೮ ಸರಕಾರದೊಂದಿಗಾಗಲಿ, ಯಾವ ರೀತಿ ಪತ್ರವ್ಯವಹಾರವೂ ನಡೆದಿಲ್ಲ. ಪತ್ರಿಕೆಗಳಲ್ಲಿ ಮಾನ್ಯ ಸದಸ್ಯರು ಏನು ಓದಿದ್ದಾರೊ ಅದನ್ನು ನಾನೂ ಓದಿದ್ದೇನೆ.

ಶ್ರೀ ಸಿ. ಆರ್. ರಂಗೇಗೌಡ.—ಈಗತಾನೆ ಮಾನ್ಯ ಮಂತ್ರಿಗಳು ಪತ್ರಿಕೆಗಳಲ್ಲಿ ಓದಿದ್ದೇನೆ ಎಂದು ಹೇಳಿದರು. ಸಕಾಲದಲ್ಲಿ ಅಥವಾ ಯಾವುದೇ ಕಾಲದಲ್ಲಿ ಆದರೂ ಈ ಪ್ರಶ್ನೆ ಉದ್ಭವಿಸಲು ಆ ಸಂದರ್ಭದಲ್ಲಿ ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಕೊಳ್ಳಬೇಕೆನ್ನುವುದನ್ನು ಯೋಚನೆ ಮಾಡಿ ಈಗಲೇ ಮುಂಜಾಗರೂಕತೆಯಿಂದ ಆ ಕ್ರಮ ತೆಗೆದುಕೊಳ್ಳುವುದು ಸರಿಯಾಗುತ್ತದೆಯಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಒಂದು ಸೂಚನೆ.

ಶ್ರೀ ಅಂಗಡಿ ಚನ್ನಬಸಪ್ಪ.—ಮಾನ್ಯ ಮುಖ್ಯ ಮಂತ್ರಿಗಳು ಒಂದು ಪ್ರಕಟನೆ ಹೊರಡಿಸಿ ಈ ಗೋವಾ ಕರ್ನಾಟಕಕ್ಕೆ ಸೇರಬೇಕೆಂದು ಹೇಳಿಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ನನ್ನ ಸ್ವಂತ ಅಭಿಪ್ರಾಯ ಪ್ರಶ್ನೆ ಕೇಳಿದಾಗ ಹೇಳಿದ್ದೇನೆ.

Sri B. R. SUNTHANKAR.—May I know whether it is a fact that some time back the Hon'ble Chief Minister declared that Mysore will not lay claim on Goa?

Sri S. NIJALINGAPPA.—We already laid claim in public; every Kannadiga has laid claim on Goa in public. But the Government as such has not acted.

†Indicates that the remarks or speeches have not been revised by the member concerned.

ಶ್ರೀ ಡಿ. ಎಂ. ಸಿದ್ದಯ್ಯ.—ಗೋವಾ ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ ಮೈಸೂರು ರಾಜ್ಯ ದೊಂದಿಗೆ ಹೊಂದಿಕೊಳ್ಳತಕ್ಕ ಸಂಸ್ಕೃತಿ ಮತ್ತು ಚರಿತ್ರೆಯನ್ನು ಹೊಂದಿಲ್ಲವೇ ? ಗೋವಾ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಮೈಸೂರಿನೊಂದಿಗೆ ಚೆನ್ನಾಗಿ ಹೊಂದಾಣಿಕೆಯಾಗುತ್ತದೆ ಅಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಅಭಿಪ್ರಾಯದ ಮಾತು.

Sri K. LAKKAPPA.—As Chief Minister, did you repudiate the statement made by the Defence Minister on the inclusion of Goa in Maharashtra ?

Sri S. NIJALINGAPPA.—As Chief Minister there is nothing to repudiate.

[Sri N. O. SAMAJI put a supplementary question in Marathi. (English Translation).—May I know whether the Government is aware that Samyukta Marathawadi Gomantak Party of Goa won the elections on the issue of merger of Goa with Maharashtra and formed the Government ?]

Sri S. NIJALINGAPPA.—The Government is aware of so many facts. The less said about it the better.

Sri B. P. KADAM.—Is it not a fact that Congressmen lost the elections on account of their stand about merger with Maharashtra ?

Sri S. NIJALINGAPPA.—On the other hand, it is the misdemeanour of certain people that is responsible for the failure of the Congress.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಗೋವಾ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಅನೇಕತರಹದ ಪ್ರಭಾವಗಳು ಅಥವಾ ಅವರ ಅಧಿಕಾರದ ಮೂಲಕ ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬೀರುತ್ತಾ ಇರುವುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆಯೇ ?

Mr. SPEAKER.—Are we discussing the merits and demerits of the Goa Elections on the floor of this House ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಗೋವಾ ಪ್ರಾಂತ್ಯದ ಪಕ್ಕದಲ್ಲಿರತಕ್ಕ ರಾಜ್ಯಗಳು ನಮಗೆ ಸೇರಬೇಕು, ನಮಗೆ ಸೇರಬೇಕು ಎಂದು ಪ್ರಶ್ನೆ ಮಾಡುತ್ತಾ ಇರುವುದನ್ನು ಹೇಳುತ್ತಾ ಇದ್ದೇನೆಯೇ ಹೊರತು ನಾನು ಎಲೆಕ್ಷನ್‌ಗೆ ಸಂಬಂಧಪಟ್ಟ ಹಾಗೆ ಏನೂ ಹೇಳುತ್ತಾ ಇಲ್ಲ. ಗೋವಾವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಕೆಲವರು ಮೈಯಕ್ತಿಕವಾಗಿ ಅಥವಾ ತಮ್ಮ ಅಧಿಕಾರದ ದೆಶೆಯಿಂದ ಕೇಂದ್ರ ಸರ್ಕಾರದ ಮೇಲೆ ಪ್ರಭಾವವನ್ನು ಬೀರುತ್ತಾ ಇರುವುದು ಮಾನ್ಯ ಮುಖ್ಯ ಮಂತ್ರಿಗಳಿಗೆ ಗೊತ್ತಿದೆಯೆ ? ಹಾಗೆ ಗೊತ್ತಿದ್ದರೆ ಮಾನ್ಯ ಮುಖ್ಯ ಮಂತ್ರಿಗಳು ಮೈಯಕ್ತಿಕವಾಗಿ ಅಥವಾ ಮುಖ್ಯ ಮಂತ್ರಿಗಳಾಗಿ ಏನಾದರೂ ಕಾರ್ಯಕ್ರಮ ಕೈಕೊಂಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ —ಅದನ್ನು ಮುಖ್ಯಮಂತ್ರಿಗಳಿಗೇ ಬಿಡುವುದು ಒಳ್ಳೆಯದು.

Sri B. P. KADAM.—May I know how much amount was spent by the Government in the Goa elections in connection for getting merger of Goa with Mysore ?

Sri S. NIJALINGAPPA.—Not even a single naye paise.

Sri B. P. KADAM.—Is it not a fact that people in the border area went to Goa at the time of elections and ran helter and skelter and drowned themselves in liquor cups ?

Mr. SPEAKER.—The Member may recast the question. If Sri Kadam sticks to the wording, I am not allowing it.

ಶ್ರೀ ಎಸ್. ಗೋಪಾಲ ಗೌಡ.—ಗೋವಾವನ್ನು ಮೈಸೂರಿನೊಡನೆ ವಿಲೀನೀಕರಣ ಮಾಡತಕ್ಕ ವಿಷಯದಲ್ಲಿ ಕೇಂದ್ರದ ಜೊತೆಯಲ್ಲಿ ಪ್ರಸ್ತಾಪ ಮಾಡತಕ್ಕ ಸಂದರ್ಭ ಒದಗಲಿಲ್ಲ ಎಂದು ಹೇಳಿದರು. ಕೇಂದ್ರ ಸರ್ಕಾರದವರು ಅವರಾಗಿಯೇ ತಮ್ಮನ್ನು ಕೇಳುತ್ತಾರೆಯೇ ಅಥವಾ ತಾವೇನಾದರೂ ಅವರು ಕೇಳಿದರೆ ಹೇಳುವವರೇ ಅಥವಾ ಮೈಸೂರು ಸರ್ಕಾರದವರೇನಾದರೂ ಗೋವಾ ಕರ್ಣಾಟಕಕ್ಕೆ ಸೇರಬೇಕು ಎನ್ನತಕ್ಕ ಅಭಿಪ್ರಾಯವನ್ನು ಪರ್ಯಾಲೋಚನೆಮಾಡಿ ಕೇಂದ್ರದ ಮುಂದೆ ಇಟ್ಟಿದ್ದೀರಾ ?

ಅಧ್ಯಕ್ಷರು.–ಯೋಗ್ಯ ಸಮಯವೇ, ಅಯೋಗ್ಯ ಸಮವೇ ಇದು ಸಮಯ ತಕ್ಕದ್ದೇ, ತಕ್ಕದ್ದಲ್ಲವೇ ಎಂಬುದು ಯಾವುದನ್ನೂ ವಿಚಾರ ಮಾಡಬೇಡವೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಕಾನೂನು ಪ್ರಕಾರ ನಡೆಯತಕ್ಕ ಮಾತು ಆಗಿದೆ. ಈ ಗೋವಾ ಹಾಗೆಯೇ ಉಳಿಯಬೇಕೇ, ಬೊಂಬಾಯಿಗೆ ಅಥವಾ ಮಹಾರಾಷ್ಟ್ರಕ್ಕೆ ಆಥವಾ ಮೈಸೂರಿಗೆ ಸೇರಬೇಕೇ ಎನ್ನುವ ವಿಚಾರದಲ್ಲಿ ಕಾನೂನು ಪ್ರಕಾರ ಅದು ನಡೆಯಬೇಕು. ಕೇಂದ್ರ ಸರ್ಕಾರದವರು ಬದಲಾವಣೆಯಾಗಬೇಕು ಎಂದಾಗ, ಮುಂದೆ ಎಲ್ಲಾ ಸರ್ಕಾರದವರನ್ನೂ ಕೇಳುತ್ತಾರೆ. ಆಗ ಅಭಿಪ್ರಾಯವನ್ನು ಕೊಡುತ್ತೇವೆ.

Sri V. S. PATIL.—May I know whether this Government have appointed a Committee consisting of Sri Malimath and Sri Channiah to tag the Goa territory with Mysore area as also to investigate into past history ?

Sri S. NIJALINGAPPA.—I am not aware of any Committee being appointed consisting of these two gentlemen to go into the history of Goa.

ಶ್ರೀ ಡಿ. ಎಂ. ಸಿದ್ದಯ್ಯ.—ಎಲ್ಲಾ ಕಾರಣಗಳನ್ನೂ ಪರಿಶೀಲನೆ ಮಾಡಿದರೆ ಗೋವಾ ಮೈಸೂರಿಗೇ ಸೇರತಕ್ಕದ್ದು ನ್ಯಾಯವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಆಗಲೇ ಹೇಳಿದ್ದೇನೆ, ಅದು ಅಭಿಪ್ರಾಯದ ಮಾತು.

ಶ್ರೀ ಎಸ್. ಗೋಪಾಲ ಗೌಡ.—ಕಾಲ ಕಾಲಕ್ಕೆ ಗೋವಾ ಸಮಸ್ಯೆಯ ಬಗ್ಗೆ ಮಹಾರಾಷ್ಟ್ರದವರು ಅಥವಾ ಗೋವಾದವರು ನಿಲುವನ್ನು ತೆಗೆದುಕೊಂಡು ಏನಾದರೂ ಹೇಳಿದಾಗ ಮೈಸೂರು ಸರ್ಕಾರದವರ ಪರವಾಗಿಯೂ ಅವರ ನಿಲುವನ್ನು ಸ್ಪಷ್ಟಪಡಿಸಬೇಕಾಗಿ ಬರುವುದರಿಂದ ಮೈಸೂರು ಸರ್ಕಾರದವರು ಏನಾದರೂ ಗೋವಾದ ಬಗ್ಗೆ ಖಚಿತವಾದ ಒಂದು ನಿಲುವನ್ನು ತೆಗೆದುಕೊಂಡಿದ್ದಾರೆಯೆ ಅಥವಾ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಉತ್ತರ ಸಮಯಬಂದಾಗ ತೆಗೆದುಕೊಳ್ಳುತ್ತಾರೆ.

Sri B P. KADAM.—Is it not a fact that many congressmen from Marathi Border areas of the State went to Goa during elections and may I know whether the Government have spent for this purpose ?

Sri S. NIJALINGAPPA.—I have said, Sir, not a single pie has been spent by this Government or anybody and if our friends had interfered in the elections, the results would have been different.

Sri B. R SUNTHANKAR.—May I know whether there is party or section or group who sponsored the case of Goa's merger with Mysore ? Any individuals ?

Sri S. NIJALINGAPPA.—I am not aware of any group. But the entire sentiment of the State is merger of Goa with Mysore.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಹಾರಾಷ್ಟ್ರ ಸರ್ಕಾರ ಮತ್ತು ಅಲ್ಲಿನ ಮುಖ್ಯ ಮಂತ್ರಿಗಳು ಗೋವ ತಮ್ಮ ಜೊತೆ ಸೇರಬೇಕೆಂದು ಪ್ರಚಾರ ಮಾಡುತ್ತಿರುವಾಗ, ಅವರು ತಮ್ಮ ನಿಲುವನ್ನು ಖಚಿತಪಡಿಸುತ್ತಿರುವಾಗ ಮೈಸೂರಿನ ಜನರ ಪರವಾಗಿ ಮೈಸೂರು ಸರ್ಕಾರದ ಮುಖ್ಯಮಂತ್ರಿಗಳು ಮತ್ತು ಮೈಸೂರು ರಾಜ್ಯದ ರಾಜಕೀಯ ಮುಖಂಡರ ನಿಲುವು ಗೋವ ಮೈಸೂರಿನೊಡನೆ ಸೇರುವ ವಿಚಾರದಲ್ಲೇನಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಮಹಾರಾಷ್ಟ್ರ ಸರ್ಕಾರ ಪ್ರಚಾರ ಮಾಡುತ್ತಿರುವುದು ಗೊತ್ತಿಲ್ಲ. ಆದರೆ ಅಲ್ಲಿನ ಮುಖಂಡರು ಪ್ರಚಾರ ಮಾಡುತ್ತಿದ್ದಾರೆಂದು ಪತ್ರಿಕೆಯಲ್ಲಿ ಬರುತ್ತಿದೆ. ಅದೇರೀತಿ ನಾವು ಪ್ರಚಾರ ಮಾಡುತ್ತಿದ್ದೇವೆ.

Here I can only give information as Government. I cannot give replies to all questions which pertain to persons' opinions.

Mr. SPEAKER.—The question relates to the Mysore Government and not to individuals.

Sri S. NIJALINGAPPA.—The Mysore Government Ministers have not taken any interest in going about broadcasting their opinions.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಹಿಂದೆ ಒಂದು ಪ್ರಶ್ನೆ ಕೇಳಿದಾಗ ಈ ವಿಷಯವನ್ನು ಮುಖ್ಯ ಮಂತ್ರಿಗಳು ತಮ್ಮ ವಿವೇಚನೆಗೆ ಬಿಡುವುದು ಒಳ್ಳೆಯದೆಂದು ಹೇಳಿದರು ; ಸಂತೋಷ. ಈ ವಿಚಾರದಲ್ಲಿ ಅವರು ಶಕ್ತಿಯುತರಾಗುವುದಕ್ಕೆ ಈ ಶಾಸನಸಭೆಯ ಅಭಿಪ್ರಾಯವನ್ನು ಒಳ್ಳೆಯ ಸಮಯದಲ್ಲಿ ತೆಗೆದುಕೊಳ್ಳುವುದು ಸೂಕ್ತವಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೆಯೇ ಮಾಡುತ್ತೇವೆ, ತಮ್ಮ ಅಭಿಪ್ರಾಯ ತಿಳಿಯದೆ ಏನೂ ಮಾಡುವುದಿಲ್ಲ.

ಶ್ರೀ ಕುಂದೂರು ರುದ್ರಪ್ಪ.—ಈ ಸಭೆಯ ಬೆಂಬಲವಿರುವುದರಿಂದ ಅದನ್ನು ಉಪಯೋಗಿಸಿಕೊಂಡು ಗೋವ ನಮಗೇ ಸೇರಬೇಕೆಂದು ಏಕೆ ಕೇಳಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೂ ಸಮಯವುಂಟು, ಸಂದರ್ಭವುಂಟು.

ಶ್ರೀ ಎ. ಜೆ. ದೊಡ್ಡಮೇಟಿ.—ಗೋವಾಂತಕ ಕಾಂಗ್ರೆಸ್ ಪಕ್ಷದವರು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳನ್ನು ಚುನಾವಣೆ ಪ್ರಚಾರಕ್ಕೆ ಕರೆದಹಾಗೆ ತಮ್ಮನ್ನೂ ಕರೆದಿದ್ದರೆ ?

ಶ್ರೀ ಎಸ್. ನಿಜಲಿಂಗಪ್ಪ.—ಇಲ್ಲ.

ಶ್ರೀ ಟಿ. ಮಾದಯ್ಯ ಗೌಡ.—ಗೋವಾ ಪ್ರಾಂತದಲ್ಲಿರುವ ನೂರಾರು ಶಿಲಾಶಾಸನಗಳು ಸ್ಥಳೀಯ ರಾಜರಿಗೆ ನಡೆದಿರುವ ಕಾಲುಕರಾರುಗಳು ಮುಂತಾದುವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಕೇವಲ ಒಂದು ಸಲಹೆ.

Sri L. B. BIRJE.—(Marathi).

Mr. SPEAKER.—Why should he refer to the Maharashtra Government ?

Sri V. S. PATIL.—[Translated into English] The question is whether this Government had sent some people for canvassing at the time of the last elections in Goa and if they had not sent any person, why they had not sent. If they had sent.....]

Mr. SPEAKER.—I do not permit that part of the question. If Government is to function in the manner suggested, it will be contrary to the rules of election, peoples' representation Act, etc. Does he want the Government to go and participate.

Sri V. S. PATIL.—Sir, I am merely translating. Whether Government is aware that if they had sent any emissaries for the election, the Bandurkar Government would have had thirty instead of 17 or 16 representations.

Sri S, NIJALINGAPPA,— This Government was not interested in sending anybody for purposes of propaganda. It would not have been correct. This Government believes that any decision that has to be taken about the future of Goa has to be decided by those people themselves and it would be a political sin if anybody from outside were to drag them. Therefore, we were not interested in sending anybody. And, if we had sent, the results would have been different. It is a matter of opinion.

ಶ್ರೀ ಕೆ ಲಕ್ಕಪ್ಪ.—ಗೋವ ಮೈನೂರು ದೇಶಕ್ಕೆ ಸೇರಲು ಐತಿಹಾಸಿಕ ಮತ್ತು ಸಾಂಸ್ಕೃತಿಕ ಹೊಂದಾಣಿಕೆಯಿರುವ ಬಗ್ಗೆ ಅಂಕಿಅಂಶಗಳನ್ನು ಆದಷ್ಟು ಬೇಗ ಸರ್ಕಾರ ತಯಾರಿಸುವುದೇ ?

ಶ್ರೀ ಎಸ್. ನಿಜಲಿಂಗಪ್ಪ.—ಮುಖ್ಯವಾಗಿರುವುದು ಗೋವಾ ಜನರ ಅಭಿಪ್ರಾಯ, ನಮ್ಮದು ಮತ್ತು ಮಹಾರಾಷ್ಟ್ರದ್ದಲ್ಲ. ಅವರು ಹೇಗೆ ಅಭಿಪ್ರಾಯಪಟ್ಟರೆ ಹಾಗೆ ಮಾಡಬಹುದು.

ಶ್ರೀ ಸಿ. ಆರ್. ರಂಗೇಗೌಡ.—ಧಾರವಾಡದ ಕರ್ನಾಟಕ ಯೂನಿವರ್ಸಿಟಿ ಅಧ್ಯಯನ ತಂಡದವರು ಗೋವಾ ಪ್ರದೇಶದಲ್ಲಿ ಪ್ರವಾಸಮಾಡಿ ವರದಿ ತಯಾರಿಸಿರುವುದು ಸರ್ಕಾರಕ್ಕೆ ಬಂದಿದೆಯೇ ? ಬಂದಿದ್ದರೆ ಅದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸರ್ಕಾರಕ್ಕೆ ಬಂದಿಲ್ಲ.

Sri B. V. MAGAVI.—Is there sub-versive agitation not to merge Goa with Mysore ?

Sri S. NIJALINGAPPA.—Everybody is aware of it.

Sri N. O. SAMAJI.—(Marathi)

Mr. SPEAKER.—This question does not arise. I can understand Marathi. My mother-tongue is Konkan. Eighty per cent is common.

ಶ್ರೀ ಎಸ್. ಗೋಪಾಲ ಗೌಡ.—ಗೋವಾ ಮತ್ತು ಕರ್ನಾಟಕಗಳ ಮಧ್ಯೆ ಇರುವ ಸಾಂಸ್ಕೃತಿಕ, ಭಾಷಿಕ ಹಾಗೂ ಆರ್ಥಿಕ ಸಂಬಂಧವನ್ನು ಕೇಂದ್ರದವರಿಗೆ ಶೃತಪಡಿಸಿ ಕರ್ನಾಟಕ ರಾಜ್ಯದ ಪರವಾಗಿ ಒಂದು ಮನವಿಪತ್ರವನ್ನು ಮೊದಲೇ ಕೇಂದ್ರಕ್ಕೆ ಸಲ್ಲಿಸುವ ವಿಷಯವನ್ನು ಪರ್ಯಾಲೋಚಿಸುತ್ತೀರಾ ?

Sri S. NIJALINGAPPA.—It is a suggestion for action.

12-30 P.M.

Sri V. S. PATIL.—Is it a fact that just after the elections some disgruntied Goans have seen our Chief Minister and the latter has promised to help them to resist the merger of that tract into Maharashtra ?

Sri S. NIJALINGAPPA.—I think my friend has misunderstood the entire thing. Quite a large number of representatives from Goa including the members of the House of the Legislature came and saw me and expressed that they would like to remain as a separate entity. I told them that it is their case and they can express it, and that they will have my full sympathy. I did not say that it should merge here or there.

Extending the benefit of the Pay Scale of Rs. 80-150 to Primary School Teachers who have passed L. S. Examination, U. T. C. Training, etc.

*Q.—126. Sri H. D. DEVE GOWDA (Holenarasipur).—

Will the Government be pleased to state :—

(*a*) whether it is a fact that they have issued an order to extend the benefit of the pay scale of Rs. 80-150 to such Primary School Teachers, who have passed the following examinations ;

(i) Lower Secondary Examination ;
(ii) U. T. C. Training ;
(iii) English subject in S. S. L. C.

(*b*) whether the said order has been given effect to ;

(*c*) the number of teachers in Hassan District who have not been given the above scale in spite of passing all the examinations mentioned above ;

(*d*) the reasons for the same ;

(*e*) whether they would take the steps to sanction the above scale to them at least now ?